ಅದಕ್ಕೆ ಹತ್ತಿದ ಅನ್ನದ ಕಣಗಳು!... ಪ್ರತಿನಿತ್ಯ ಹೀಗೆ ಇವರೊಟ್ಟಿಗೆ ಚಹಾ... ಊಟ... ಅಬ್ಬಾ ಇದೆಲ್ಲ ಯಾಕೋ ಸುರಳೀತವಾಗುವ ಕೆಲಸವಲ್ಲ ಎಂದು ಆ ಕ್ಷಣದಲ್ಲೇ ಅನ್ನಿಸಿಬಿಟ್ಟಿತವನಿಗೆ. ಏನು ಮಾತಾಡಲೂ ತೋಚಲಿಲ್ಲ. ಮೌನವಾಗಿ ಊಟ ಸಾಗಿತು. ಅವರೊಡನೆ ಮಾತುಕತೆ ಒಮ್ಮೆ ಮುಗಿದರೆ ಸಾಕು ಅನ್ನುವಂತೆ ತುದಿಗಾಲ ಮೇಲೆ ನಿಂತೇ ಕೇಳೋದು, ಅವರ ಪ್ರಶ್ನೆ ಪೂರ್ತಿ ಮುಗಿಯುವ ಮುಂಚೆಯೇ ಅದಕ್ಕೆ ಉಲ್ಟಾ ಉತ್ತರ ತಲೆಯಲ್ಲಿ ಮಸೆದಿಡೋದು, ಆದರೆ ಸಡ್ಡು ಹೊಡೆದು ಜವಾಬು ಕೊಡಲು ಮಾತ್ರ ಆಗದೆ ಬೆಪ್ಪನಂತೆ ಸುಮ್ಮನಾಗಿಬಿಡೋದು; ಆಮೇಲೆ ಕೂತಲ್ಲಿ ನಿಂತಲ್ಲಿ ಉತ್ತರ ಕೊಡಲಾಗದ ತನ್ನ ಹೇಡಿತನಕ್ಕೆ ಮುಖ ಕೆಂಪು ಮಾಡಿಕೊಳ್ಳುತ್ತಾ ಹಲ್ಲು ಕಟಿಯುತ್ತಾ ಇಡೀ ದಿನ ಕಳೆಯೋದು ಅವನ ಇಂದು ನಿನ್ನಿನ ರೂಢಿಯಲ್ಲವಲ್ಲ.

ಮತ್ತೆ ಮನದಲ್ಲಿ ಗಜಿಬಿಜಿ ಸಂವಾದ ಶುರುವಾಯ್ತು, "ಅಪ್ಪ ನಮ್ಮನೆಗೆ ಬಂದರೆ ಏನು ಮಹಾ ಅಡ್ಜಸ್ಟ್‌ಮೆಂಟ್ ಮಾಡ್ಕೋಬೇಕಾಗಿದೆ? ರಾಹುಲನ ಖೋಲಿಯಲ್ಲಿಯೇ ಒಂದು ಗಾದಿ ಹಾಕೋದಪ್ಪ, ನಳಿನಿಗೆ ನಾಲ್ಕರ ಬದಲಿ ಆರು ಚಪಾತಿಯ ಕಣಕ ನಾದಬೇಕಾಗಬಹುದು, ಪಾವ ಕಿಲೋ ಕಾಯಿಪಲ್ಲೆಯ ಬದಲು ಅರ್ಧಕಿಲೋ ಹತ್ತೀತು. ತಿಂಗಳಿಗೊಮ್ಮೆ ಡಾಕ್ಟರ ಚೆಕ್ ಅಪ್ ಇಂಥಾ ಚೂರುಪಾರು ಬದಲಾವಣೆಗಳೇ ತಾನೆ?"

ಅಪ್ಪ ಥರ್‍ರೆಂದು ತೇಗಿದ ಸದ್ದಿಗೆ ಸಂವಾದ ಸ್ತಬ್ಧ! ಊಟ ಮುಗಿಸಿ ಕೈ ತೊಳೆದಾಗ ಅವನಿಗೆ ಸಣ್ಣಗೆ ತಲೆನೋವು ಶುರುವಾಗಿತ್ತು. ನೋಯುತ್ತಿರುವುದು ನೆತ್ತಿಯೋ, ಹಣೆಯೋ, ಮೂಗೋ ತಿಳಿಯದೆ ಎಲ್ಲ ಕಡೆ ಅಮೃತಾಂಜನ ಇವ ಮೆತ್ತಿಕೊಳ್ಳುವಾಗಲೇ ಅಡುಗೆಯ ಕಟ್ಟೆ ತೊಳೆಯದೆ, ಗ್ಯಾಸೊಲೆಯ ಮುಸುರೆ ಕೂಡಾ ಒರೆಸದೆ ರಾಮರಾಯರು ಟೀವಿಯ ಮುಂದಿನ ತಮ್ಮ ಆರಾಮ ಕುರ್ಚಿಯಲ್ಲಿ ಧಸ್ಸೆಂದು ಕುಸಿದು, ರಿಮೋಟೆತ್ತಿಕೊಂಡು ಯಾವುದೋ ಚಾನೆಲ್ ಒತ್ತಿದರು. ಧಾರಾವಾಹಿಯ ಬೇಸುರ್ ಹಾಡು ಕಿವಿ ತಮಟೆ ಕಿತ್ತುವಂತೆ ಕಿರುಚಿತು. ನೋಡಿದರೆ ವಾಲ್ಯೂಮ್ ಗುಂಡಿ ನಾಲ್ವತ್ತಕ್ಕಿದೆ. ಅಪ್ಪನ ಕೈಯಿಂದ ರಿಮೋಟು ಕಿತ್ತಿಕೊಂಡು ಅದನ್ನು ಇಪ್ಪತ್ತಕ್ಕಿಳಿಸಿದ.

ಒಮ್ಮೆಲೆ ಯಾವ ಪೀಠಿಕೆಯೂ ಇಲ್ಲದೆ, "ಅಪ್ಪಾ, ನಾಳೆ ನನ್ನ ಕೂಡ ಮುಂಬೈಗೆ ಬಂದುಬಿಡು. ಇನ್ನ ಇಲ್ಲಿ ನಡೆಯೂಹಂಗ ಕಾಣಂಗಿಲ್ಲ ನಿಂದು" ಅಂತದುಬಿಟ್ಟ ರಮೇಶ. ಈ ಮಾತಿಗೇ ಕಾದಿದ್ದಂತೆ ಅವರೂ ಒಂದೇ ಪಟ್ಟಿಗೆ, "ಹೌದೋ ರಮೇಶಾ, ಖರೆ ಹೇಳಬೇಕೆಂದರೆ ಫೋನು ಮಾಡಿ ನಾನs ನಿನ್ನನ್ನು ಕರೆಸಿಕೋಬೇಕಂತ ಮಾಡಿದ್ದೆ. ನೀನೇ ಅನಾಯಾಸ ಕೆಲಸದ ಮ್ಯಾಲ ಬಂದೀ, ಛಲೋ ಆತು. ನನಗೆ ಕಿವಿ ಕೇಳೋದು ಕಮ್ಮಿಯಾಗಿ ಭಾಳ ತ್ರಾಸಾಗೇದ, ನನಗಿಂತಾ ಮಂದಿ ತಮಗ ತ್ರಾಸಾಗೇದ ಅನ್ನೂ ಹಂಗ ಮಾತಾಡ್ತಾರ. ಮನೀ ಸ್ವಚ್ಛ ಇಟಕೋಳಿಕ್ಕೆ ಕೂಡಾ ಆಗದಂಗ ಆಗೇದ. ಗೋಡೆ ತುಂಬಾ ಜಾಲಿ, ತಾರಸಿಯ ಮೂಲೆ ಮೂಲಿಯೊಳಗೂ ಇಂಬಳಾ ನೋಡಿದೀಯಿಲ್ಲೋ" ಅಂತ ಒಂದೇ ಸಮನೆ ಬಡಬಡಿಸುತ್ತಿರುವಾಗಲೇ ತಾರಸಿಯಿಂದ ರಪ್ಪೆಂದು ಏನೋ ನೆಲಕ್ಕೆ ಬಿತ್ತು. ನೋಡಿದರೆ ಕಪ್ಪು ಮುದ್ದೆಯಂಥಾ ಗುಬ್ಬಿ ಮರಿ. ಇನ್ನೂ ಪುಕ್ಕ ಸುದ್ದಾ ಹುಟ್ಟದ ಎರಡೋ ಮೂರೋ ದಿನದ್ದು. ಪಾಪ ಬಿದ್ದ ಪಟ್ಟಿಗೆ ಸತ್ತೇ ಹೋಗಿತ್ತು.

"ಹಿಂಗs ನೋಡು ಹಳೆಕಾಲದ ಹಂಚಿನಮನಿಗೆ ಹತ್ತತ್ತು ಫೂಟು ಎತ್ತರದ ಕಟ್ಟಿಗೆತೊಲೆಗಳು. ನನಗಂತೂ ಅಷ್ಟೆತ್ತರಕ್ಕ ಕಣ್ಣೂ ಕಾಣೂದಿಲ್ಲ, ಕೈಯಂತೂ ನಿಲುಕೂದೇ ಇಲ್ಲ. ಯಾವಾಗ ಗುಬ್ಬಿ ಗುಟ್ಟಾಗಿ ಗೂಡು ಕಟ್ಟಿಕೊಂಡಿತ್ತೋ, ಯಾವ ಮಾಯದಾಗ ತತ್ತಿ ಇಟ್ಟಿತೋ ಯಾರಿಗೆ ಗೊತ್ತು?" ಎಂದು ಯಾಕೋ ಒಮ್ಮೆಲೆ ಸುಮ್ಮನಾದರು. ಇವ ಮೇಲೆದ್ದು ಕಸಬರಿಗೆ ತಂದು ಸತ್ತು ಬಿದ್ದ ಗುಬ್ಬಿಯನ್ನು ಗುಡಿಸಿ ಅಲ್ಲೇ ಇದ್ದ ನ್ಯೂಸ್ ಪೇಪರಲ್ಲಿ ತುಂಬತೊಡಗಿದರೆ, "ಹೇ ಪೇಪರು ಇವತ್ತಿಂದೋ ಅದು, ಒಳಗಿಂದ ಬ್ಯಾರೆ ಹಳೇದು ತಗೊಂಡು ಬಾ" ಅಂತ ಒದರಿದರು. ಕೋಪ ಬಂದರೂ ತುಟಿ